# ಕರ್ನಾಟಕ ಸರ್ಕಾರ

ಸಂಖ್ಯೆ : ಕಂಇ 117 ಮುನೋಮು 2009

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ : 23/10/2009.

## ಸುತ್ತೋಲೆ

**ವಿಷಯ : ನೋಂದಣಿ ಸಮಯದಲ್ಲಿ 11ಇ ನಕ್ಷೆಗಳನ್ನು ಕಡ್ಡಾಯವಾಗಿ ಹಾಜರಿಪಡಿಸಿದ ನಂತರ ನೋಂದಣಿ ಮಾಡುವ ಬಗ್ಗೆ ವಿನಾಯಿತಿ ನೀಡುವ ಕುರಿತು.**

**ಉಲ್ಲೇಖ : 1) ಸರ್ಕಾರಿ ಸುತ್ತೋಲೆ ಸಮ ಸಂಖ್ಯೆ ದಿ:30/7/2009.**
**2) ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ಇವರ ಪತ್ರ ಸಂ.ತಾಂತ್ರಿಕ/54/2009-10, ದಿನಾಂಕ:5/10/2009**

***

Rgm.

ಉಲ್ಲೇಖ (1)ರ ಸರ್ಕಾರದ ಸುತ್ತೋಲೆಯ ಅನ್ವಯ ಭೂ ಪರಿವರ್ತನೆ ಬಗ್ಗೆ ಆರ್.ಟಿ.ಸಿ.ಯಲ್ಲಿ ಮಾಹಿತಿ ಇಲ್ಲದಿದ್ದಲ್ಲಿ ಅಂತಹ ಎಲ್ಲಾ ಪ್ರಕರಣಗಳ ನೋಂದಣಿಗೆ ಮುನ್ನಾ 11ಎ ನಕ್ಷೆ ಹಾಜರುಪಡಿಸಲು ಸ್ಪಷ್ಟ ಸೂಚನೆ ನೀಡುವಂತೆ ಮತ್ತು 11ಇ ನಕ್ಷೆ ಹಾಜರುಪಡಿಸಿದ ನಂತರವೇ ನೋಂದಣಿ ಕಾರ್ಯದನ್ನು ಕೈಗೊಳ್ಳುವಂತೆ ಸೂಚಿಸಲಾಗಿದೆ.

ಉಲ್ಲೇಖ (2)ರ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಇವರು ಮೇಲ್ಕಂಡ ಸುತ್ತೋಲೆಯ ಅನ್ವಯ ಭೂ ಪರಿವರ್ತನೆಯಾಗಿರುವಂತಹ ಎಲ್ಲಾ ಪ್ರಕರಣಗಳ ವಿವರಗಳನ್ನು ಆರ್.ಟಿ.ಸಿ.ಯಲ್ಲಿ ನಮೂದು ಮಾಡಲು ತುಂಬಾ ಕಾಲಾವಕಾಶ ಬೇಕಾಗಿದ್ದು ಅಲ್ಲಿಯವರೆಗೂ ಸಾರ್ವಜನಿಕರಿಗೆ ತೊಂದರೆಯಾಗುವುದೆಂದು ಈ ಬಗ್ಗೆ ತಾತ್ಕಾಲಿಕ ವಿನಾಯಿತಿ ಕೊಡಲು ಕೋರಿರುತ್ತಾರೆ.

ಜಿಲ್ಲಾಧಿಕಾರಿಗಳ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಈಗಾಗಲೇ ಭೂ ಪರಿವರ್ತನೆ ಆಗಿರುವಂತಹ ಎಲ್ಲಾ ಪ್ರಕರಣಗಳನ್ನು ಆರ್.ಟಿ.ಸಿ.ಗಳಲ್ಲಿ ನಮೂದಿಸಲು ಕಾಲಾವಕಾಶ ಬೇಕಾಗುವುದೆಂದು ಸರ್ಕಾರಕ್ಕೆ ಮನವರಿಕೆಯಾಗಿರುತ್ತದೆ. ಈ ಬಗ್ಗೆ ಸಾರ್ವಜನಿಕರಿಗೆ ತೊಂದರೆಯಾಗಬಾರದೆಂಬ ಕಾರಣಕ್ಕಾಗಿ ಈ ಕೆಳಕಂಡಂತೆ ಸೂಚನೆ ನಿಡಲಾಗಿದೆ. :-

26/X/09

1. ಉಲ್ಲೇಖ (1)ರಲ್ಲಿನ ಸುತ್ತೋಲೆಯಲ್ಲಿ ನಿಡಿರುವ ಸೂಚನೆಗಳಿಗೆ 3 ತಿಂಗಳುಗಳ ತಾತ್ಕಾಲಿಕ ವಿನಾಯಿತಿ ನೀಡಲಾಗಿದೆ.
2. ಅಲ್ಲಿಯವರೆಗೆ ಭೂ ಮಾಲೀಕರು ಹಾಜರುಪಡಿಸುವ ಭೂ ಪರಿವರ್ತನೆ ಆದೇಶದ ಧೃಢೀಕೃತ ಪ್ರತಿಗಳನ್ನು ಪಡೆದು ನೋಂದಣಿ ಮಾಡತಕ್ಕದ್ದು.
3. ಈ ಮಧ್ಯೆ 3 ತಿಂಗಳುಗಳೊಳಗಾಗಿ ಎಲ್ಲಾ ಜಿಲ್ಲಾಧಿಕಾರಿಗಳು ಭೂ ಪರಿವರ್ತನೆ ವಿವರಗಳನ್ನು ಆರ್.ಟಿ.ಸಿ.ಗಳಲ್ಲಿ ನಮೂದು ಮಾಡಲು ಕ್ರಮ ಕೈಗೊಳ್ಳತಕ್ಕದ್ದು.
4. ಈ ಸೂಚನೆಗಳು ಈ ಸುತ್ತೋಲೆ ಹೊರಡಿಸಿದ ದಿನಾಂಕದಿಂದ ಮೂರು ತಿಂಗಳ ಅವಧಿಯವರೆಗೆ ಮಾತ್ರ ಜಾರಿಯಲ್ಲಿರುತ್ತದೆ.

4/10

**(ಜಿ.ಎಸ್. ನಾರಾಯಣಸ್ವಾಮಿ)**
ಸರ್ಕಾರದ ಕಾರ್ಯದರ್ಶಿ
ಕಂದಾಯ ಇಲಾಖೆ.

ಇವರಿಗೆ,

1. ಮಹಾ ಪರಿವೀಕ್ಷಕರು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಬೆಂಗಳೂರು
2. ಎಲ್ಲಾ ಪ್ರಾದೇಶಿಕ ಆಯುಕ್ತರುಗಳಿಗೆ,

ನೋಂದಣಿ ಮಹಾಪರಿವೀಕ್ಷಕರು ಹಾಗೂ
ಮುದ್ರಾಂಕಗಳ ಆಯುಕ್ತರವರ ಕಛೇರಿ
ನಂ 720, ಕಂದಾಯ ಭವನ, ಜಯನಗರ
ಬೆಂಗಳೂರು - 560 082